**ಇಂದು ದಿನಾಂಕ 25.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀಮತಿ ಪಿ ವಿ ಆರ್ ವಾದಿ ಪರ ವಕೀಲರಿಂದಃ**

1. ನಾನು 7 ನೇ ತರಗತಿವರೆಗೆ ಓದಿದ್ದೇನೆ. ಸದರಿ ದಾವೆಯಲ್ಲಿ ಪ್ರತಿವಾದ ಪತ್ರವನ್ನು ನನ್ನ ತಂದೆ ಸಲ್ಲಿಸಿರುತ್ತಾರೆ ಮತ್ತು ಅವುಗಳ ವಿಷಯ ಸಂಗತಿ ನನಗೆ ಗೊತ್ತಿದೆ.

2. ದಾವಾ ಆಸ್ತಿಗಳು ವಾದಿ ಮತ್ತು ಪ್ರತಿವಾದಿಯರ ಪಿತ್ರಾರ್ಜಿತ ಮತ್ತು ಒಟ್ಟು ಕುಟುಂಬದ ಆಸ್ತಿಗಳು ಇವೆ ಎಂದರೆ ಸಾಕ್ಷಿದಾರರು ನನ್ನ ತಾತನ ಸ್ವಯಾರ್ಜಿತ ಆಸ್ತಿಗಳು ಎಂದು ಹೇಳುತ್ತಾರೆ. ಸರ್ವೇ ನಂ.35/3 ನಮ್ಮ ಒಟ್ಟು ಕುಟುಂಬದ ಆಸ್ತಿ ಎಂದರೆ ಸಾಕ್ಷಿದಾರರು ನನ್ನ ತಾತನಿಗೆ ಇನಾಮ್ ನಾತೆಯಿಂದ ಮಂಜೂರಾತಿ ಆದ ಆಸ್ತಿ ಎಂದು ಹೇಳುತ್ತಾರೆ. ಸದರಿ ಆಸ್ತಿಯನ್ನು 17-08-2011 ರಲ್ಲಿ ವಾದಿ ಪ್ರತಿವಾದಿಯರು ಸೇರಿ ಮಲ್ಲಮ್ಮ ಎನ್ನುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿದಾರರು ನನ್ನ ತಾತನೇ ಮಾರಾಟ ಮಾಡಿರುತ್ತಾರೆ ಎನ್ನುತ್ತಾರೆ. ಕ್ರಯದ ಪ್ರತಿಫಲ ನನಗೆ ಗೊತ್ತಿಲ್ಲ.

3. ವಾದಿ ಮತ್ತು ಪ್ರತಿವಾದಿ ನಂ.1, 5 ಮತ್ತು 6 ರ ಮಧ್ಯೆ ಇಲ್ಲಿಯವರೆಗೂ ವಿಭಾಗವಾಗಿಲ್ಲ. ದಾವಾ ಆಸ್ತಿಗಳು ಮೂಲತಃ ಚಿಕ್ಕಪಿಳ್ಳಯ್ಯನಿಗೆ ಸೇರಿದ್ದು ಎಂದರೆ ನಿಜ. ಸದರಿ ಚಿಕ್ಕಪಿಳ್ಳಯ್ಯ ಖಾಸಗಿ ಗುತ್ತಿಗೆದಾರರಿದ್ದರು ಎಂದರೆ ನಿಜ. ಸದರಿ ಚಿಕ್ಕಪಿಳ್ಳಯ್ಯ 2012 ರಲ್ಲಿ ತಮ್ಮ 95 ನೇ ವಯಸ್ಸಿಗೆ ತೀರಿ ಹೋಗಿದ್ದಾರೆ. ಸದರಿಯವರಿಗೆ ಯಾವುದೇ ರೀತಿ ಖಾಯಿಲೆ ಇರಲಿಲ್ಲ. 2010 ರಿಂದ ಸದರಿ ಚಿಕ್ಕಪಿಳ್ಳಯ್ಯ ವಯಕ್ತಿಕವಾಗಿ ಯಾವುದೇ ರೀತಿ ಸ್ವಂತ ವ್ಯವಹಾರ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಮುಪ್ಪು ವಯಸ್ಸನ್ನು ದುರುಪಯೋಗ ಮಾಡಿಕೊಂಡು ನಾನು ಮತ್ತು 4 ನೇ ಪ್ರತಿವಾದಿ ದಾನ ಪತ್ರವನ್ನು ಮೋಸ ಪೂರಿತವಾಗಿ ಮಾಡಿಸಿಕೊಂಡಿದ್ದೇವೆ ಎಂದರೆ ಸುಳ್ಳು. ವಾದಿಗೆ ಮೋಸ ಮಾಡುವ

ಉದ್ದೇಶದಿಂದಲೇ ಈ ರೀತಿ ದಾನ ಪತ್ರವನ್ನು ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ದಾನ ಪತ್ರಕ್ಕೆ ವಾದಿಯರ ಒಪ್ಪಿ ಗೆ ಪಡೆಯಲಾರದ ಕಾರಣ ಅದು ವಾದಿಗೆ ಬಂಧನಕಾರಿಯಾಗುವುದಿಲ್ಲ ಎಂದರೆ ಸಾಕ್ಷಿದಾರರು ದಾನ ಪತ್ರ ಮಾಡುವಾಗ ವಾದಿಯನ್ನು ನನ್ನ ತಾತ ಕರೆದಿದ್ದರು ಆದರೆ ಹುಷಾರಿಲ್ಲದ ಕಾರಣ ಅವರು ಬಂದಿರಲಿಲ್ಲ ಎಂದು ಹೇಳುತ್ತಾರೆ.

**(ಈ ಹಂತದಲ್ಲಿ ವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ವಾಟೀ ಸವಾಲಿಗಾಗಿ ಕಾಲಾವಕಾಶ ಕೋರುತ್ತಾರೆ, ಕಾಲಾವಕಾಶ ನೀಡಿ ಸಾಕ್ಷಿಯ ವಾಟೀ ಸವಾಲನ್ನು ಮುಂದೂಡಲಾಯಿತು).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

**(ಶ್ರೀಮತಿ ವಿಜಯಲಕ್ಷ್ಮಿ ಘನಾಪುರ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**